O.S.No.:567/2016

P.W.:3

ಈ ದಿನ ದಿಃ 14.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ. ಸಿ.ಆರ್.ಜೆ. ವಕೀಲರಿಂದಃ

ನನಗೆ ವಾದಿ ಮತ್ತು ಪ್ರತಿವಾದಿ ಗೊತ್ತು. ದಾವಾ ಆಸ್ತಿ ನನಗೆ ಗೊತ್ತು. ಸದರಿ ದಾವಾ ಸ್ವತ್ತು 1 ನೇ ವಾದಿಗೆ ಸೇರಿದ್ದಾಗಿರುತ್ತದೆ. ದಾವಾ ಸ್ವತ್ತು ಪೂರ್ವ ಪಶ್ಚಿಮ 45 ಉತ್ತರ ದಕ್ಷಿಣ 55 ಅಡಿ ಇರುತ್ತದೆ. ದಾವಾ ಸ್ವತ್ತಿನ ಖಾತೆ ನಂಬರ್ ನನಗೆ ಗೊತ್ತಿಲ್ಲ.

ಸುಬ್ಬೇಗೌಡರ ಮನೆಯ ದಕ್ಷಿಣದ ಕಡೆಗೆ ಪ್ರತಿವಾದಿಯ ಖಾಲಿ ನಿವೇಶನ ಇರುತ್ತದೆ ಎಂದರೆ ಸರಿಯಲ್ಲ. ಸದರಿ ನಿವೇಶನವನ್ನು ದಿನಾಂಕ 09.04.1969 ಪ್ರತಿವಾದಿ ಸುಬ್ಬೇಗೌಡರು ಬಚ್ಚೆಗೌಡರಿಂದ ಮನೆ ಮತ್ತು ನಿವೇಶನವನ್ನು ಕ್ರಯಕ್ಕೆ ಪಡೆದಿದ್ದರು ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರದ ಆಧಾರದ ಮೇಲೆ ಪ್ರತಿವಾದಿ ಹೆಸರಿಗೆ ದಿನಾಂಕ 20.02.2001 ರಂದು ಬೂಕನಕೆರೆ ಪಂಚಾಯತಿಯವರು ಖಾತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ಕ್ರಯಕ್ಕೆ ಪಡೆದ ದಿನದಿಂದ ಪ್ರತಿವಾದಿಯೇ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ವಾದಿಯ ಜೊತೆ ನಾನು ಚೆನ್ನಾಗಿರುವ ಕಾರಣ ವಾದಿಗೆ ಸಹಾಯ ಮಾಡಲು ಪ್ರತಿವಾದಿಗಳ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಕೆ.ಆರ್.ಪೇಟೆ .